**ಸಾಕ್ಷಿಯನ್ನು ದಿಃ 21.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಈ.ಪಿ. ವಕೀಲರಿಂದಃ–**

9 ವರ್ಷಗಳಿಂದ ನಾನು ಪೇಪರ್ ವರದಿಗಾರನಾಗಿರುತ್ತೇನೆ. ಈ ಹಿಂದೆ ಪಾಟೀ ಸವಾಲಿನಲ್ಲಿ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದು, ಈಗ 9 ವರ್ಷಗಳಿಂದ ನಾನು ಪತ್ರ ಕರ್ತನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿತ್ತಿದ್ದೇನೆ, ಎರಡರಲ್ಲಿ ಯಾವುದು ಸಹಿ ಎಂದರೆ ಹಿಂದೆ ಹೇಳಿರುವುದು ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಯಾವಾಗಿನಿಂದ ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ದಾಖಲೆಯನ್ನು ಹಾಜರು ಪಡಿಸಿಲ್ಲ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸುವಂತೆ ಹಿಂದೆ ಪಾಟೀ ಸವಾಲಿನಲ್ಲಿ ಕೇಳಲಾಗಿತ್ತು ಎಂದರೆ ಸರಿ. ಪತ್ರಕರ್ತನಾಗಿ ಕೆಲಸ ಮಾಡುತಿದ್ದರೆ ಪ್ರಮಾಣ ಪತ್ರ ಕೊಡುತ್ತಾರೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಯಾವ ವರ್ಷದಿಂದ ಕೆಲಸ ಮಾಡುತ್ತಿದ್ದೆ ಎಂಬ ಬಗ್ಗೆ ನಮೂದಿಸುತ್ತಾರೆ ಎಂದರೆ ಸರಿಯಲ್ಲ. ಪ್ರತಿ ವರ್ಷ ಹೊಸದಾಗಿ ಅಂದರೆ ರಿನಿವಲ್ ಪ್ರಮಾಣ ಪತ್ರ ಕೊಡುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿಯ ರಿನಿವಲ್ ಸರ್ಟಿಫಿಕೇಟ್ ಹಾಜರು ಪಡಿಸಿದ್ದಿರಾ ಎಂದರೆ ರಿನಿವಲ್ ಸರ್ಟಿಫಿಕೇಟ್ ಎಂದರೆ ಐ.ಡಿ ಕಾರ್ಡ ನೀಡುತ್ತಾರೆ ಅದನ್ನು ಈಗಾಗಲೆ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಐ.ಡಿ ಕಾರ್ಡ್ ಅನ್ನು ಯಾವ ದಿನಾಂಕದಂದು ನೀಡಲಾಗಿದೆ ಎಂಬ ಬಗ್ಗೆ ದಿನಾಂಕ ನಮೂದು ಇಲ್ಲ. ಪತ್ರಕರ್ತನಾಗಿ ಕೆಲಸ ಮಾಡಿದ ಯಾವ ದಿನಾಂಕದಿಂದ ಯಾವ ದಿನಾಂಕ ವರೆಗೆ ಕೆಲಸ ಮಾಡಿದ್ದೇನೆ ಎಂದೆ ವರದಿ ಸಿಗುತ್ತದೆ ಎಂದರೆ ಸರಿ. ಐ.ಡಿ ಕಾರ್ಡ್ ಇದ್ದವರೆಲ್ಲಾ ವರದಿಗಾರರಲ್ಲ ಎಂದರೆ ಸರಿಯಲ್ಲ.

ಕರ್ನಾಟಕ ಕಾರ್ಯ ನಿರತ ಪತ್ರಕರ್ತ ಸಂಘದಿಂದ ನನಗೆ ವೇತನ ಬರುವುದಿಲ್ಲ, ಸಂಬಳವನ್ನು ಪತ್ರಿಕೆ ಉದ್ಯಮದವರು ಕೊಡುತ್ತಾರೆ ಎನ್ನುತ್ತಾರೆ. ಸಂಬಳ ನಿಗದಿಯಾಗಿರುವುದಿಲ್ಲ, ಅದರೆ ನಾವು ಕೆಲಸ ಮಾಡುವ ಆಧಾರದ ಮೇಲೆ ನೀಡುತ್ತಾರೆ. ವಾರ್ಷಿಕ 3 ಲಕ್ಷದ ವರೆಗೆ ಕನ್ಸಿಡರೇಶನ್ ಕೊಡುತ್ತಾರೆ. ಹಾಗೆ ಹಣವನ್ನು ಚೆಕ್ ಮೂಲಕವೆ ಕೊಡುತ್ತಾರೆ ಎಂದರೆ ಸರಿಯಲ್ಲ. ಪತ್ರಿಕಾ ಉದ್ಯಮದವರು ಯಾವುದೆ ಹಣವನ್ನು ನೀಡಿದರೂ ಚೆಕ್ ಮೂಲಕ ಅಥವಾ ಬ್ಯಾಂಕ್ ಖಾತೆಯ ಮೂಲಕವೆ ಕೊಡುತ್ತಾರೆ ಎಂದರೆ ಸರಿಯಲ್ಲ.

ವಾರ್ಷಿಕ 3 ಲಕ್ಷ ರೂ. ವರೆಗೆ ಪ್ರತಿಫಲ ಕೊಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಪತ್ರಕರ್ತನಿಗೆ ಎಷ್ಟು ಹಣ ಕೊಡಲಾಗಿತ್ತು ಎಂದು ಪ್ರಧಾನ ಪತ್ರಕರ್ತ ಕಛೇರಿಯ ರಿಜಿಸ್ಟರ್ನಲ್ಲಿ ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪತ್ರಕರ್ತನಾಗಿ ಕೆಲಸ ಮಾಡದಿದ್ದರೂ ಈ ಕೇಸ್ ಗಾಗಿ ಐ.ಡಿ ಕಾರ್ಡ್ ಅನ್ನು ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ನಾನು ಪತ್ರಕರ್ತನಾಗಿ ಕೆಲಸ ಮಾಡುತ್ತಿರುವ ಬಗ್ಗೆ ಸಂಬಂಧಪಟ್ಟ ಕಛೇರಿಯವರನ್ನು ಕರೆಸಿ ಸಾಕ್ಷಿ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ನಾನು ಪತ್ರಕರ್ತ, ಪ್ರಧಾನ ಸಂಪಾದಕರು ವಿನೋದ್, ಅದರ ಮಾಲೀಕರು ಮಧುಸೂದರ್ ಎಂಬುವವರು ಇರುತ್ತಾರೆ. ಪ್ರಧಾನ ಕಛೇರಿ ಮೈಸೂರಿನ ಹೆಚ್.ಡಿ.ಎಫ್.ಸಿ ಬ್ಯಾಂಕ್ ನ ಮುಂಭಾಗ, ಡಬಲ್ ರೋಡ್ ನಲ್ಲಿ ಇರುತ್ತದೆ. ನಾನು 3 ವರ್ಷಗಳಿಂದ ಪತ್ರಕರ್ತನಾಗಿ ಕೆಲಸ ಮಾಡಿದ್ದು, ಎಷ್ಟು ವರದಿಗಳನ್ನು ನೀಡಿದ್ದೇನೆ ಎಂದೆಲ್ಲಾ ಇರುವುದಿಲ್ಲ. ಯಾರು ವರದಿ ಮಾಡುತ್ತಾರೊ ಅವರ ಹೆಸರು ಪತ್ರಿಕೆಯಲ್ಲಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಅದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಏಲಕ್ಕಿ, ಬಾಳೆ ಮತ್ತು ಶುಂಠಿ ಇತ್ಯಾದಿ ಬೆಳೆಯಲು ನೀರಾವರಿ ಜಮೀನು ಇರಬೇಕಾಗುತ್ತದೆ ಎಂದರೆ ಸರಿ. ಜಮೀನಿನಲ್ಲಿ ಬೋರ್ ವೆಲ್ ಕೊರೆಸಲಾಗಿರುತ್ತದೆ. ಕನೆಕ್ಷನ್ ತೆಗೆದುಕೊಂಡ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿ. ಹಾಗೆ ಬೋರ್ ವೆಲ್ ಕೊರೆದ ಬಗ್ಗೆ ರಶೀದಿ ಕೊಡುತ್ತಾರೆ ಎಂದರೆ ಸರಿ. ಯಾರ ಹೆಸರಿನಲ್ಲಿ ಜಮೀನು ಇರುತ್ತದೊ ಅವರ ಹೆಸರಿಗೆ ವಿದ್ಯೂಚ್ಛಕ್ತಿ ಸಂಪರ್ಕ ಕೊಡುತ್ತಾರೆ ಎಂದರೆ ಸರಿ. ಜಮೀನಿನಲ್ಲಿ ಬೋರ್ ವೆಲ್ ಇರುವ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ. ಅದೆ ರೀತಿ ಬೆಳೆ ಬೆಳೆಯುತ್ತಿರುವ ಬಗ್ಗೆ ಮತ್ತು ಬೋರ್ ವೆಲ್ ಇರುವ ಬಗ್ಗೆ, ಆರ್.ಟಿ.ಸಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. 2019 –20 ನೇ ಸಾಲಿನಲ್ಲಿ ನನ್ನ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. 2019 ರಲ್ಲಿ ಏಲಕ್ಕಿ, ಬಾಳೆ ಮತ್ತು ಶುಂಠಿ ಬೆಳೆಯುತ್ತಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅದನ್ನು ಬೆಳೆದು ಮಾರಾಟ ಮಾಡಿದ ಬಗ್ಗೆ ಆಗಲಿ ದಾಖಲೆ ಹಾಜರು ಪಡಿಸಿಲ್ಲ.

ನಾನು ಹಾಜರು ಪಡಿಸಿರುವ 2025-2026 ನೇ ಸಾಲಿನದ್ದು ಎಂದರೆ ಸರಿ. ಸದರಿ ಆರ್.ಟಿ.ಸಿಯಲ್ಲಿ ಯಾವುದೆ ಬೋರ್ ವೆಲ್ ಇದ್ದ ಬಗ್ಗೆ ಆಗಲಿ, ಬೆಳೆ ಇದ್ದ ಬಗ್ಗೆ ಆಗಲಿ ನಮೂದು ಇರುವುದಿಲ್ಲ ಎಂದರೆ ನಾವು ಹೇಳಿದರೆ ನಮೂದಿಸುತ್ತಾರೆ ಎಂದು ನುಡಿಯುತ್ತಾರೆ. ದಿಃ 21.03.2023 ರಲ್ಲಿ ಹಕ್ಕು ಬಿಡುಗಡೆ ಮೂಲ ಆಸ್ತಿ ನನ್ನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. 2019 ರಲ್ಲಿ ನನ್ನ ಹೆಸರಿನಲ್ಲಿ ಆರ್.ಟಿ.ಸಿ ಇರಲಿಲ್ಲ ಎಂದರೆ ಸರಿ. ಹಾಗಾಗಿ ನಾನು ಯಾವುದೆ ಏಲಕ್ಕಿ, ಬಾಳೆ ಮತ್ತು ಶುಂಠಿ ವಾಣಿಜ್ಯ ಬೆಳೆಗಳನ್ನು ಬೆಳೆದಿಲ್ಲ ಎಂದರೆ ಸರಿಯಲ್ಲ. ಹಾಗಾ ಬೆಳೆಯದೆ ಇದ್ದರೂ ಈ ಕೇಸ್ ಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜೂಲೈ 2019 ನೇ ಸಾಲಿನಲ್ಲಿ ನನ್ನ ಎಕ್ಸಿಸ್ ಬ್ಯಾಂಕ್ ಖಾತೆಯಲ್ಲಿ 14,427, 10,000 ಹಾಗೂ 20,000 ಹೀಗೆ ಇತ್ತು ಎಂದರೆ ಸರಿ. ನನ್ನ ಖಾತೆಯಲ್ಲಿ 30,000/- ರೂ. ಮೇಲ್ಪಟ್ಟು ಯಾವುದೆ ವ್ಯವಹಾರ ಮಾಡಿಲ್ಲ ಎಂದರೆ ಸದರಿ ಖಾತೆಯಲ್ಲಿ ಇಲ್ಲ ಎನ್ನುತ್ತಾರೆ. ಕರ್ನಾಟಕ ಬ್ಯಾಂಕ್ ನ ಖಾತೆಯಲ್ಲೂ ಸಹ 48, 000/-, 28,000/-, 20,000 ಹೀಗೆ ಇದ್ದು, 50,000/- ಮೇಲ್ಪಟ್ಟು 2019 ರ ಜೂಲೈ ತಿಂಗಳಲ್ಲಿ ಯಾವುದೆ ವ್ಯವಹಾರ ಆಗಿಲ್ಲ ಎಂದರೆ 1 ಲಕ್ಷ ರೂ. ವರೆಗೂ ಆಗಿದೆ ಎನ್ನುತ್ತಾರೆ. ಜೂಲೈ 2019 ರಲ್ಲಿ ನನ್ನ ಖಾತಯ ಬ್ಯಾಂಕ್ ಬ್ಯಾಲನ್ಸ್ 48 ಸಾವಿರ ರೂ. ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ಅದಾಯ ಇಷ್ಟು ಇತ್ತು ಎಂದು ಮೇಲ್ನೂಟಕ್ಕೆ ತೋರಿಸುವುದಿಲ್ಲ ಎಂದರೆ ಸರಿಯಲ್ಲ. ಬಾಳೆ, ಶುಂಠಿ ಮಾರಾಟ ಮಾಡಿದ ಹಣವನ್ನಾಗಲಿ, ಪತ್ರಕರ್ತನಾಗಿ ದುಡಿದ ಹಣವನ್ನಾಗಲಿ ಅಕೌಂಟ್ ನಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ಬ್ಯಾಂಕ್ ಖಾತೆಯಲ್ಲಿ ಹಾಕುವುದಿಲ್ಲ ಎಂದು ನುಡಿಯುತ್ತಾರೆ. ಜಮೀನಿನಲ್ಲಿ ಬಾಳೆ, ಶುಂಠಿ ಏಲಕ್ಕಿ ಬೆಳೆದ ಬಗ್ಗೆ ನೋಡಿದವರು ಸಾಕ್ಷಿ ಇರುತ್ತಾರೆ. ಅವರನ್ನು ಕರೆಸಿ ಸಾಕ್ಷಿ ಹೇಳಿಸಲು ಯಾವುದೆ ತೊಂದರೆ ಇಲ್ಲ. ಇದುವರೆಗೂ ಹಲವಾರು ದಿನಾಂಕಗಳನ್ನು ನೀಡಿದ್ದರೂ ನನ್ನ ಪರವಾಗಿ ಸಾಕ್ಷಿ ಮಾಡಿಸಿಲ್ಲ ಎಂದರೆ ಅವಶ್ಯಕತೆ ಇದ್ದರೆ ಸಾಕ್ಷಿ ಮಾಡಿಸುತ್ತೇನೆ. ಆದಾಯದ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನೊಟೀಸನ್ನು ಆರ್ಡಿನರಿ ಪೋಸ್ಟ ಮೂಲಕ ಕಳುಹಿಸಿದ ಬಗ್ಗೆ ದಾಖಲೆ ಇದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಆ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ. ಅಂಚೆ ಕಛೇರಿಯವರಿಗೆ ಸಾಕ್ಷಿ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ ಎಂದರೆ ನನಗೆ ಆಗುವುದಿಲ್ಲ ಎನ್ನುತ್ತಾರೆ. ಆರ್ಡಿನರಿ ಪೋಸ್ಟ್ ಕಳುಹಿಸಿದ್ದರೆ ಸಂಬಂಧಪಟ್ಟ ಕಛೇರಿಯಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ತಂದು ಈ ಕೇಸ್ ಗೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ತೊಂದರೆ ಇಲ್ಲ, ಆದರೆ ಹಾಜರು ಪಡಿಸಲು ಆಗುವುದಿಲ್ಲ ಎನ್ನುತ್ತಾರೆ. ಆರೋಪಿತನ ವಿಳಾಸಕ್ಕೆ ನೊಂದಿತ ಅಂಚೆಯನ್ನಾಗಲಿ , ಸಾಮಾನ್ಯ ಅಂಚೆಯನ್ನಾಗಲಿ ಕಳುಹಿಸಿಲ್ಲ. ಹಾಗೆ ಸರಿಯಾದ ವಿಳಾಸಕ್ಕೆ ನೊಟೀಸು ಕಳುಹಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆ ಜೂಲೈ 2019 ರಂದು ನನ್ನ ಹತ್ತಿರ 4 ಲಕ್ಷ ರೂ. ಹಣ ಇತ್ತು ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಓಲೆ ರವಿ ರವರ ಚಿತಾವಣೆ ಮೇರೆಗೆ ಈ ಸುಳ್ಳು ಕೇಸ್ ಹಾಕಿರುತ್ತೇನೆ ಎಂದರೆ ಸರಿ. ಸದರಿ ಓಲೆ ರವಿ ರವರು ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ಅವರು ಜೀವಂತ ಕಾಲದಲ್ಲಿ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಹೀಗೆ ಹಲವಾರು ಜನರ ಮೇಲೆ ಸುಳ್ಳು ಕೇಸ್ ಹಾಕಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನನ್ನ ಸ್ನೇಹಿತನ ಕುಟುಂಬಕ್ಕೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ ಕೇಳಿದಂತಹ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಅನ್ಯತಾ ಪಾಯಿದೆ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.